ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 24 ನೇ ಮಾರ್ಚ್, 2020

ಹಿಂದುಳಿದ ವರ್ಗಗಳಿಗೆ KIADB ಮತ್ತು KSSIDC ವತಿಯಿಂದ ನೀಡುವ ಪ್ಲಾಟ್‌ಗಳಿಗೆ ಸಬ್ಸಿಡಿ ನೀಡುವ ಕುರಿತು

ಶ್ರೀ ಹೆಚ್.ಎಂ. ರೇವಣ್ಣ(ವಿಧಾನಸಭೆಯಿಂದ ಚುನಾಯಿತರಾದವರು):-

1544 (1796) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಿಂದುಳಿದ ವರ್ಗಗಳಿಗೆ ಕೆ.ಐ.ಎ.ಡಿ.ಬಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ ನಿಂದ ಹಂಚಿಕೆ ಮಾಡಲಾಗುವ ಪ್ಲಾಟ್‌ಗಳಿಗೆ ಸಬ್ಸಿಡಿ ನೀಡುವ ಕಾರ್ಯಕ್ರಮಕ್ಕೆ ಆದೇಶ ಹೊರಡಿಸಿರುವುದು ಯಾವಾಗ;

(ಆ) ಹಿಂದುಳಿದ ವರ್ಗಗಳಿಗೆ ಶೇಕಡ ಎಷ್ಟು ಸಬ್ಸಿಡಿಯನ್ನು ಈ ಪ್ಲಾಟ್‌ಗಳಿಗೆ ನೀಡುವ ಅವಕಾಶವನ್ನು ಕಲ್ಪಿಸಲಾಗಿದೆ;

(ಇ) ಸರ್ಕಾರ ಆದೇಶ ಹೊರಡಿಸಿದಾಗಿನಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ಹಿಂದುಳಿದ ವರ್ಗಗಳ ಫಲಾನುಭವಿಗಳು ಈ ಪ್ರಯೋಜನವನ್ನು ಪಡೆದಿರುತ್ತಾರೆ. ಮತ್ತು ಎಷ್ಟು ಹಣ ಸಬ್ಸಿಡಿಯಾಗಿ ನೀಡಲಾಗಿದೆ? (ವರ್ಗವಾರು ಸಂಖ್ಯೆ ನೀಡುವುದು)